# <u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 28.10.2025ರಂದು ಪೂರ್ವಾಹ್ನ ಗಂಟೆ 10.30ಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2025ನೇ ಸಾಲಿನ ಏಳನೇ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತರು :**

| | | |
|---|---|---|
| 1. | ಪ್ರೊ. ಪಿ.ಎಲ್. ಧರ್ಮ<br>ಕುಲಪತಿಗಳು | ಅಧ್ಯಕ್ಷರು |
| 2. | ಡಾ. ಕವಿತಾ ಕೆ.ಆರ್.<br>ಜಂಟಿ ನಿರ್ದೇಶಕರು (**ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ)** | ಸದಸ್ಯರು |
| 3. | ಪ್ರೊ. ಪರಿಣಿತ<br>ಡೀನರು, ಕಲಾ ನಿಕಾಯ | ಸದಸ್ಯರು |
| 4. | ಡಾ. ಎಸ್.ಬಿ.ಎಂ. ಪ್ರಸನ್ನ [Online] | ಸದಸ್ಯರು |
| 5. | ಶ್ರೀ ಸುರೇಶ್ ಕುಮಾರ್ ಬಿ. ನಾವೂರು | ಸದಸ್ಯರು |
| 6. | ಪ್ರೊ. ಉದಯ ಕುಮಾರ್ ಬಿ. | ಸದಸ್ಯರು |
| 7. | ಶ್ರೀ ನಿತ್ಯಾನಂದ ವಿ. ಗಾಂವಕರ | ಸದಸ್ಯರು |
| 8. | ಶ್ರೀಮತಿ ಶೃತಿ ಶೆಟ್ಟಿ | ಸದಸ್ಯರು |
| 9. | ಶ್ರೀ ಸಿ.ಎ. ನಿತಿನ್ ಜೆ. ಶೆಟ್ಟಿ | ಸದಸ್ಯರು |
| 10. | ಶ್ರೀಮತಿ ಜೂಡಿತ್ ಮೆಂಡೋನ್ಸ | ಸದಸ್ಯರು |
| 11. | ಶ್ರೀ ರಘುರಾಜ್ | ಸದಸ್ಯರು |
| 12. | ಶ್ರೀ ಅಚ್ಚುತ ಗಟ್ಟಿ | ಸದಸ್ಯರು |
| 13. | ಶ್ರೀ ಮಹಮ್ಮದ್ ಸವಾದ್ | ಸದಸ್ಯರು |

| | | |
|---|---|---|
| 14. | ಶ್ರೀಮತಿ ಪುಷ್ಪಲತಾ ಹೆಚ್.ಕೆ.<br>ಪ್ರಾಂಶುಪಾಲರು ಮತ್ತು ಸಹ ನಿರ್ದೇಶಕರು, ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ, **(ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಆಯುಕ್ತರ ಪರವಾಗಿ)** | ಸದಸ್ಯರು |
| 15. | ಪ್ರೊ. ಹೆಚ್. ದೇವೇಂದ್ರಪ್ಪ<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 16. | ಶ್ರೀ ಪಂಚಲಿಂಗಸ್ವಾಮಿ, **ಕೆ.ಎಸ್.ಎ.ಎಸ್.,**<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ ಆಹ್ವಾನಿತರು |
| 17. | ಶ್ರೀ ಕೆ. ರಾಜು ಮೊಗವೀರ, **ಕೆ.ಎ.ಎಸ್.**<br>ಕುಲಸಚಿವರು (ಆಡಳಿತ) | ಸದಸ್ಯ ಕಾರ್ಯದರ್ಶಿ |

**ಅನುಪಸ್ಥಿತರು:**

| | | |
|---|---|---|
| 1. | ತಾಂತ್ರಿಕ ಶಿಕ್ಷಣ ನಿರ್ದೇಶಕರು,<br>ಕರ್ನಾಟಕ ಸರ್ಕಾರ<br>ಬೆಂಗಳೂರು | ಸದಸ್ಯರು |
| 2. | ಡಾ. ಕೆ.ಸಿ. ಮಹದೇಶ | ಸದಸ್ಯರು |
| 3. | ಡಾ. ಸಂದೇಶ್ ಕೆ.ಎಸ್<br>(ವೈದ್ಯಕೀಯ ಶಿಕ್ಷಣ ನಿರ್ದೇಶಕರ ಪರವಾಗಿ) | ಸದಸ್ಯರು |

# ಪ್ರಾರಂಭಿಕ

**ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಯವರನ್ನು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.**

- **ಸ್ವಾಗತ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಎಫ್) ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳ ಜೇಷ್ಠತೆ ಹಾಗೂ ಸರದಿಯ ನೆಲೆಯಲ್ಲಿ ಸದಸ್ಯರಾಗಿ ದಿನಾಂಕ 08.10.2025 ರಿಂದ ಅನ್ವಯವಾಗುವಂತೆ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿರುವ ಈ ಕೆಳಗಿನ ಪ್ರಾಂಶುಪಾಲರುಗಳನ್ನು ಸಿಂಡಿಕೇಟು ಸಭೆಗೆ ಕುಲಸಚಿವರು ಸ್ವಾಗತಿಸಿದರು.

1. ಪ್ರೊ. ಉದಯ ಕುಮಾರ್ ಬಿ., ಪ್ರಾಂಶುಪಾಲರು, ಶ್ರೀ ಗೋಕರ್ಣನಾಥೇಶ್ವರ ಕಾಲೇಜ್ ಆಫ್ ಎಜ್ಯುಕೇಷನ್, ಗಾಂಧೀನಗರ, ಮಂಗಳೂರು
2. ಶ್ರೀ ನಿತ್ಯಾನಂದ ವಿ. ಗಾಂವಕರ, ಪ್ರಭಾರ ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ, ತೆಂಕನಿಡಿಯೂರು, ಉಡುಪಿ
3. ಶ್ರೀಮತಿ ಶೃತಿ ಶೆಟ್ಟಿ, ಪ್ರಾಂಶುಪಾಲರು, ಮ್ಯಾಪ್ಸ್ ಕಾಲೇಜು, ಮಂಗಳೂರು .

ಮಾನ್ಯ ಕುಲಪತಿಯವರು ಮತ್ತೊಮ್ಮೆ ಎಲ್ಲರನ್ನು ಸ್ವಾಗತಿಸಿ, ಸಭೆಯನ್ನು ಪ್ರಾರಂಭಿಸಿದರು.

- **ಸಂತಾಪ ಸೂಚಕ ನಿರ್ಣಯ:**

ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ದೈಹಿಕ ಶಿಕ್ಷಣ ಹಾಗೂ ಕ್ರೀಡಾ ಅಧ್ಯಯನ ವಿಭಾಗದ ಅಧ್ಯಕ್ಷರು ಹಾಗೂ ನಿರ್ದೇಶಕರು ಮ ತ್ತು ಡೀನರು , ಶಿಕ್ಷಣ ನಿಕಾಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ .ಕಿಶೋರ್ ಕುಮಾರ್ ಸಿ.ಕೆ. ಇವರು ದಿನಾಂಕ 05.10.2025ರಂದು ದೈವಾಧೀನರಾಗಿರುತ್ತಾರೆ. ಸದರಿಯವರು ಮಂಗಳೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಗಳಾಗಿ ಹಾಗೂ ಕುಲಸಚಿವರಾಗಿದ್ದ ಅವಧಿಯಲ್ಲಿ ಸಿಂಡಿಕೇಟು , ಶೈಕ್ಷಣಿಕ ಮಂಡಳಿ ಹಾಗೂ ಇತರೆ ಪ್ರಾಧಿಕಾರ ಗಳ ಅಧ್ಯಕ್ಷರಾಗಿದ್ದು, ವಿಶ್ವವಿದ್ಯಾನಿಲಯದ ಆಡಳಿತ ಮತ್ತು ಶೈಕ್ಷಣಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿರುತ್ತಾರೆ . ಇವರ ನಿಧನಕ್ಕೆ ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭೆಯು ಅತೀವ ಸಂತಾಪವನ್ನು ವ್ಯಕ್ತಪಡಿಸಿ, ಒಂದು ನಿಮಿಷದ ಮೌನ ಪ್ರಾರ್ಥನೆಯನ್ನು ಸಲ್ಲಿಸಿ ಸಂತಾಪ ಸೂಚಕ ನಿ ರ್ಣಯವನ್ನು ಅಂಗೀಕರಿಸಿತು.

ತದನಂತರ, ಸಿಂಡಿಕೇಟು ಸದಸ್ಯರುಗಳಾದ ಶ್ರೀ ಅಚ್ಚುತ ಗಟ್ಟಿ ಮತ್ತು ಪ್ರೊ. ಉದಯ ಕುಮಾರ್ ಬಿ., ಇವರು ಡಾ.ಕಿಶೋರ್ ಕುಮಾರ್ ಸಿ.ಕೆ. ಇವರ ಕುರಿತು ಹಿತ ನುಡಿಗಳನ್ನು , ಅವರೊಂದಿಗಿನ ಒಡನಾಟದ ದಿನಗಳನ್ನು ನೆನಪಿಸುತ್ತಾ ವಿಶ್ವವಿದ್ಯಾನಿಲಯವು ಒಬ್ಬ ಉತ್ತಮ ಕ್ರೀಡಾಪಟುವನ್ನು, ಪ್ರಾಧ್ಯಾಪಕರನ್ನು ಕಳೆದುಕೊಂಡಿರುವ ಬಗ್ಗೆ ಸಂತಾಪವನ್ನು ವ್ಯಕ್ತಪಡಿಸುತ್ತಾ , ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ದೇವರು ಕರುಣಿಸಲಿ ಎಂದು ಸಭೆಯಲ್ಲಿ ತಿಳಿಸಿದರು.

## I. ಅನುಸರಣಾ ವರದಿಯ ಅನುಮೋದನೆ

**- ಅನುಮೋದಿಸಲಾಯಿತು –**

## II. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.7:1(2025)

ವಿಷಯ: ಶ್ರೀ ಬಸವಣ್ಣ ಆರ್ ., ಕಿರಿಯ ಅಭಿಯಂತರರು (ವಿದ್ಯುತ್) ಇವರನ್ನು ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕಾನಾಮಿಕ್ಸ್ ವಿಶ್ವವಿದ್ಯಾನಿಲಯಕ್ಕೆ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.7:2(2025)

ವಿಷಯ: ಡಾ.ಕೆ.ಸಿ. ಮಹದೇಶ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ-1 : ಪ್ರಸ್ತುತ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧ್ಯಾಪಕರು ಮತ್ತು ಅಧ್ಯಾಪಕೇತರ ಸಿಬ್ಬಂದಿಗಳ ಸಂಖ್ಯೆ ಮತ್ತು ಸರ್ಕಾ ರದ ಅನುದಾನದಿಂದ ಅವರಿಗೆ ನೀಡುತ್ತಿರುವ ಸಂಬಳದ ವಿವರಗಳು ಮತ್ತು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ಸಂಬಳ ನೀಡುತ್ತಿರುವ ಸಿಬ್ಬಂದಿಗಳ, ಅಧ್ಯಾಪಕ/ ಅಧ್ಯಾಪಕೇತರರ ವಿವರಗಳನ್ನು ತಿಳಿಸುವುದು ಮತ್ತು ಚರ್ಚಿಸಿ ನಿರ್ಣಯಿಸುವುದು (ಕ್ರಮ ಸಂಖ್ಯೆ 1).

**ನಿರ್ಣಯ:** ಸದಸ್ಯರು ಸಭೆಯಲ್ಲಿ ಅನುಪಸ್ಥಿತರಿರುವುದರಿಂದ ಪ್ರಸ್ತಾವನೆಯನ್ನು ಮುಂದಿನ ಸಿಂಡಿಕೇಟು ಸಭೆಗೆ ಕೈಗೆತ್ತಿಕೊಳ್ಳಲು ನಿರ್ಣಯಿಸಲಾಯಿತು.

ವಿಷಯ-3 : ವಿಶ್ವವಿದ್ಯಾನಿಲಯದ ಜೊತೆ ಪ್ರಸ್ತುತ ಇದುವರೆಗೆ ಒಡಂಬಡಿಕೆ ಮಾಡಿಕೊಂಡು ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳ ಸಂಖ್ಯೆಗಳ ಮಾಹಿತಿ ನೀಡುವುದು ಮತ್ತು ಕಾರ್ಯ ನಿರ್ವಹಿಸದೆ ಇರುವ ಸಂಸ್ಥೆಗಳ ಮಾಹಿತಿ ಮತ್ತು ಅವು ಗಳ ಮೂಲಕ ವಿಶ್ವವಿದ್ಯಾನಿಲಯಕ್ಕೆ ಆಗುತ್ತಿರುವ ಅನುಕೂಲ ಮತ್ತು ಪೂರಕ ಮಾಹಿತಿಯನ್ನು ನೀಡಿ ಚರ್ಚಿಸಿ ನಿರ್ಣಯಿಸುವುದು (ಕ್ರಮ ಸಂಖ್ಯೆ 3).

**ನಿರ್ಣಯ:** ಸದಸ್ಯರು ಸಭೆಯಲ್ಲಿ ಅನುಪಸ್ಥಿತರಿರುವುದರಿಂದ ಪ್ರಸ್ತಾವನೆಯನ್ನು ಮುಂದಿನ ಸಿಂಡಿಕೇಟು ಸಭೆಗೆ ಕೈಗೆತ್ತಿಕೊಳ್ಳಲು ನಿರ್ಣಯಿಸಲಾಯಿತು

ವಿಷಯ-4 : ಮಂಗಳೂರು ವಿಶ್ವ ವಿದ್ಯಾನಿಲಯದ B.Ed./ M.Ed. ಕಾಲೇಜುಗಳ ಸಂಖ್ಯೆಗಳು ಮತ್ತು ಅವುಗಳ ಕಾರ್ಯನಿರ್ವಹಣೆ ಮತ್ತು ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೋರ್ಸ್ ಗಳಲ್ಲಿ ಪಿಹೆಚ್.ಡಿ. ಸಂಶೋಧನಾ ಕೇಂದ್ರಗಳನ್ನು ನೀಡಿರುವ ಸಂಪೂರ್ಣ ಮಾಹಿತಿಯನ್ನು ಮತ್ತು ಅವುಗಳ ಕಾರ್ಯನಿರ್ವಹಣೆ , ವಾರ್ಷಿಕ ನವೀಕರಣ ದ ಸಂಪೂರ್ಣ ಮಾಹಿತಿಗಳನ್ನು ನೀಡುವುದು ಮತ್ತು ಚರ್ಚಿಸಿ ನಿರ್ಣಯಿಸುವುದು . (ಕ್ರಮ ಸಂಖ್ಯೆ 4).

**ನಿರ್ಣಯ:** ಸದಸ್ಯರು ಸಭೆಯಲ್ಲಿ ಅನುಪಸ್ಥಿತರಿರುವುದರಿಂದ ಪ್ರಸ್ತಾವನೆಯನ್ನು ಮುಂದಿನ ಸಿಂಡಿಕೇಟು ಸಭೆಗೆ ಕೈಗೆತ್ತಿಕೊಳ್ಳಲು ನಿರ್ಣಯಿಸಲಾಯಿತು

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.7:3(2025)

ವಿಷಯ: ಶ್ರೀ ಸುರೇಶ್ ಕುಮಾರ್ ಬಿ. ನಾವೂರು, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ-1 : ವಿಶ್ವವಿದ್ಯಾನಿಲಯದಲ್ಲಿ ಪ್ರಗತಿಯಲ್ಲಿರುವ ಯಾವುದೇ ಕಾಮಗಾರಿಗಳು ಸಿಂಡಿಕೇಟ್ ಸದಸ್ಯರಿಂದ ವೀಕ್ಷಣೆಗೆ ಒಳಪಡುವಂತೆ ಮಾಡಲು ಈ ಬಗ್ಗೆ ಸಮಿತಿ ರಚನೆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು (ಕ್ರಮ ಸಂಖ್ಯೆ 3).

**ನಿರ್ಣಯ:** ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಗಿ ಸಮಿತಿ ರಚಿಸಿರುವ ಬಗ್ಗೆ ಮುಂದಿನ ಸಿಂಡಿಕೇಟು ಸಭೆಗೆ ವರದಿಯನ್ನು ನೀಡುವುದಾಗಿ ನಿರ್ಣಯಿಸಲಾಯಿತು.

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು:ಸಾ.ಸ.7:4(2025) |
| ವಿಷಯ: | ಶ್ರೀ ರಘುರಾಜ್, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ. |
| ವಿಷಯ-1 : | ತುಳು ಭಾಷೆಯಲ್ಲಿ ಪಿಹೆಚ್.ಡಿ. ಮಾಡಲು ಆಸಕ್ತರಿರುವ ತುಳುವರಿಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಸಿಂಡಿಕೇಟ್ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳುವುದು ಮತ್ತು ತೃತೀಯ ಲಿಂಗಿಗಳಿಗೆ ಪಿಹೆಚ್.ಡಿ. ಮಾಡಲು ಅವಕಾಶ ಒದಗಿಸಿ ಕೊಡಲು ಚರ್ಚಿಸಿ ನಿರ್ಣಯ ಕೈಗೊ ಳ್ಳುವುದು. ಪಿಹೆಚ್.ಡಿ. ಪದವಿ ಪಡೆಯಲು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಕೆಲವು ಕಾಲೇಜುಗಳ ಅರ್ಹ ಉಪನ್ಯಾಸಕರಿಗೆ ಪಿಹೆಚ್ .ಡಿ. ಮಾರ್ಗದರ್ಶಕರಾಗಿ ನೇಮಕ ಮಾಡಲು ಕ್ರಮಕೈಗೊಳ್ಳಲು ನಿರ್ಣಯಿಸುವುದು. |
| **ನಿರ್ಣಯ:** | ಪ್ರಸ್ತಾವನೆಯನ್ನು ಸುದೀರ್ಘವಾಗಿ ಚರ್ಚಿಸಲಾಯಿತು. ಸದರಿ ವಿಚಾರವನ್ನು ವಿಶೇಷ ನೆಲೆಯಲ್ಲಿ ಪರಿಗಣಿಸುವ ಹಿನ್ನೆಲೆಯಲ್ಲಿ ಡೀನರುಗಳ ಸಭೆಗೆ ಊರಿನ ಹಿರಿಯ ಪ್ರಾಧ್ಯಾಪಕರುಗಳನ್ನು ಹಾಗೂ ತುಳು ಅಕಾಡೆಮಿಯ ಪರಿಣತರುಗಳನ್ನು ಆಹ್ವಾನಿಸಿಕೊಂಡು ತುಳು ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ವಿಚಾರವನ್ನು ತಕ್ಷಣವೇ ಚರ್ಚಿಸಿ ಕ್ರಮಕೈಗೊಳ್ಳಬಹುದೆಂಬುದಾಗಿ ನಿರ್ಣಯಿಸಲಾಯಿತು.<br>ಮುಂದುವರಿದು, ಸಂಶೋಧನಾ ಮಾರ್ಗದರ್ಶಕರನ್ನಾಗಿ ಮಾನ್ಯತೆ ನೀಡುವ ಬಗ್ಗೆಯೂ ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿರುವ ವಿನಿಯಮಕ್ಕೆ ಪೂರಕವಾದ ಮಾರ್ಗಸೂಚಿಯನ್ನು ತಯಾರಿಸಿಕೊಂಡು ಸೂಕ್ತ ಕ್ರಮಕೈಗೊಳ್ಳಬಹುದೆಂಬುದಾಗಿಯೂ ನಿರ್ಣಯಿಸಲಾಯಿತು.<br>ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ಮಾರ್ಗದರ್ಶಕರ ಸಂಖ್ಯೆಯು ಇಳಿಮುಖವಾಗಿರುವುದರಿಂದ ಅಲ್ಲದೆ ಹಿರಿಯ ಪ್ರಾಧ್ಯಾಪಕರುಗಳು ನಿವೃತ್ತರಾಗುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ಸಂಶೋಧನೆಗೆ ತೊಂದರೆಯಾಗುತ್ತಿರುವುದನ್ನು ಸಿಂಡಿಕೇಟು ಗಂಭೀರವಾಗಿ ಗಮನಿಸಿಕೊಂಡು ವಿಶ್ವವಿದ್ಯಾನಿಲಯವು ಈ ಬಗ್ಗೆ ಸೂಕ್ತ ಯೋಜನೆಗಳನ್ನು ಹಾಕಿಕೊಳ್ಳಲು ನಿರ್ಣಯಿಸಲಾಯಿತು.<br>ವಿಶ್ವವಿದ್ಯಾನಿಲಯದ ಘಟಕ / ಸಂಯೋಜಿತ ಕಾಲೇಜುಗಳಲ್ಲಿ ಖಾಯಂ ನೆಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹತ್ತು ವರ್ಷಗಳ ಬೋಧನಾ ಅನುಭವವಿರುವ ಹಿರಿಯ ಅಧ್ಯಾಪಕರುಗಳು ಸಂಶೋಧನಾ ಮಾರ್ಗದರ್ಶಕರಾಗಿ ಪರಿಗಣಿಸಲು ಜಂಟಿ ನಿರ್ದೇಶಕರ ಸಹಕಾರದೊಂದಿಗೆ ಅಂಕಿ ಅಂಶಗಳನ್ನು ಸಂಗ್ರಹಿಸಿ ಮುಂದಿನ ಶೈಕ್ಷಣಿಕ ವರ್ಷಕ್ಕೆ ಸಂಶೋಧನಾ |

| | |
|---|---|
| | ಮಾರ್ಗದರ್ಶಕರಾಗಿ ಮಾನ್ಯತೆ ಹೊಂದುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.<br>ತೃತೀಯ ಲಿಂಗಿ ವಿದ್ಯಾರ್ಥಿಗಳಿಂದ ಪಿಹೆಚ್.ಡಿ. ಕಾರ್ಯಕ್ರಮಕ್ಕೆ ಪ್ರವೇಶಾತಿ ಕೋರಿ ಅರ್ಜಿಗಳು ಸ್ವೀಕೃತವಾದಲ್ಲಿ ಸೂಕ್ತ ಕ್ರಮಕೈಗೊಳ್ಳಲಾಗುವುದಾಗಿ ಸಭೆಯಲ್ಲಿ ತಿಳಿಸಲಾಯಿತು. |
| ವಿಷಯ-2 : | ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಅಲ್ಪಸಂಖ್ಯಾತರ ಘಟಕ ಅಥವಾ ವಿಭಾಗವನ್ನು ಸ್ಥಾಪಿಸಿ , ಅಲ್ಪಸಂಖ್ಯಾತರ ಶೈಕ್ಷಣಿಕ ಪ್ರಗತಿಗಾಗಿ ಮಾ ಹಿತಿ ನೀಡಲು ಮತ್ತು ವಿದ್ಯಾರ್ಥಿ ವೇತನ ಹಾಗೂ ಇತರೆ ಸವಲತ್ತುಗಳ ಬಗ್ಗೆ ಅರಿವು ಮೂಡಿಸಲು ಒಂದು ವಿಭಾಗವನ್ನು ಸ್ಥಾಪಿಸಲು ಚರ್ಚಿಸಿ ನಿರ್ಣಯ ಕೈಗೊಳ್ಳುವುದು. |
| **ನಿರ್ಣಯ:** | ವಿಶ್ವವಿದ್ಯಾನಿಲಯದಲ್ಲಿ ಅಲ್ಪ ಸಂಖ್ಯಾತರ ಘಟಕ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಹಾಗೂ ಅದರ ಕಾರ್ಯವೈಖರಿಯನ್ನು ಸಭೆಯ ಗಮನಕ್ಕೆ ತರಲಾಯಿತು. ವಿಶ್ವವಿದ್ಯಾನಿಲಯದಲ್ಲಿ ಪ್ರತ್ಯೇಕವಾದ ಅಲ್ಪಸಂಖ್ಯಾತರ ಘಟಕ ಸ್ಥಾಪಿಸುವ ಸಂಬಂಧ ಸರಕಾರಕ್ಕೆ ಅನುಮತಿ ಕೋರಿ ಪತ್ರ ಬರೆಯಲು ಹಾಗೂ ಮಾನ್ಯ ಸಿಂಡಿಕೇಟು ಸದಸ್ಯರುಗಳಾದ ಶ್ರೀಮತಿ ಜುಡಿತ್ ಮೆಂಡೋನ್ಸ ಮತ್ತು ಶ್ರೀ ಮಹಮ್ಮದ್ ಸವಾದ್ ಇವರುಗಳ ಸಹಕಾರವನ್ನು ಪಡೆದುಕೊಂಡು ವಿಶ್ವವಿದ್ಯಾನಿಲಯಕ್ಕೆ ಅನುದಾನವನ್ನು ತರುವಲ್ಲಿ ಕ್ರಮಕೈಗೊಳ್ಳಬಹುದಾಗಿಯೂ ನಿರ್ಣಯಿಸಲಾಯಿತು. |
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು:ಸಾ.ಸ.7:5(2025) |
| ವಿಷಯ: | ಶ್ರೀ ರಘುರಾಜ್, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.<br>RUSA ಅನುದಾನದಲ್ಲಿ ಪುರುಷರ ಹಾಗೂ ಮಹಿಳೆಯರ ಹಾಸ್ಟೆಲ್ ಕಾಮಗಾರಿಗಾಗಿ ಮೀಸಲಿಟ್ಟ ಅನುದಾನವನ್ನು ಇಂಟರ್ ನ್ಯಾಷನಲ್ ಹಾ ಸ್ಟೆಲ್ ಗೆ ವರ್ಗಾಯಿಸಿದ ವಿಚಾರದ ಬಗ್ಗೆ ಇರುವ ಮಾಹಿತಿಯ ಬಗ್ಗೆ ಸರ್ಕಾರದ ನಿರ್ದೇಶನ ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು ಮತ್ತು ನಿರ್ಣಯ ಕೈಗೊಳ್ಳುವುದು (ಕ್ರಮ ಸಂಖ್ಯೆ 4). |
| **ನಿರ್ಣಯ:** | ವಿಶ್ವವಿದ್ಯಾನಿಲಯಕ್ಕೆ ಬಿಡುಗಡೆಯಾದ ಅನುದಾನವನ್ನು ಬೇರೆ ಉದ್ದೇಶಗಳಿಗೆ ಬಳಸಿಕೊಂಡ ಎಲ್ಲಾ ಉದಾಹರಣೆಗಳನ್ನು ಒಳಗೊಂಡು status report ಅನ್ನು ಮಂಡಿಸುವುದು ಸೂಕ್ತವೆಂದು ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ನಿತಿನ್ ಶೆಟ್ಟಿ ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಅದರಂತೆ ವಸ್ತುಸ್ಥಿತಿಯ ವರದಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು. |

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.7:6(2025)

ವಿಷಯ: ಶ್ರೀ ರಘುರಾಜ್, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ-1 : SC/ST ವಿದ್ಯಾರ್ಥಿಗಳ ಕಾಲೇಜು ಶುಲ್ಕ ಹಾಗೂ ಪರೀಕ್ಷಾ ಶುಲ್ಕದಲ್ಲಿ ಆದ ಬದಲಾವಣೆಯ ಮಾಹಿತಿ ಮತ್ತು ಸರಕಾರದಿಂದ ಬರುವ ಶುಲ್ಕವನ್ನು ಬಿಟ್ಟು ಉಳಿದ ಹೆಚ್ಚುವರಿ ಶುಲ್ಕವನ್ನು ಈ ಹಿಂದೆ ನಿರ್ವಹಣೆ ಮಾಡಿರುವ ಬಗ್ಗೆ ಮಾಹಿತಿ ಮತ್ತು ಈಗ ಪಡೆದುಕೊಳ್ಳುವ ವಿಧಾನದ ಬಗ್ಗೆ ಮಾಹಿತಿ . ವಿಶ್ವವಿದ್ಯಾನಿಲಯದಲ್ಲಿ ಈ ಸಾಲಿನ ಒಟ್ಟು ವಾರ್ಷಿಕ ಬಜೆಟ್ ನಲ್ಲಿ SC/ST ಅಭಿವೃದ್ಧಿಗಾಗಿ ಮೀಸಲಿಟ್ಟ ಒಟ್ಟು ಮೊತ್ತದ ವಿವರ ಯಾವೆಲ್ಲ ಕಾರ್ಯಕ್ರಮಕ್ಕೆ ನೀಡಿದ್ದೀರಿ ಎಂಬ ಮಾಹಿತಿ .

**ನಿರ್ಣಯ:** ಕಾರ್ಯಸೂಚಿ ಸಂಖ್ಯೆ ಪ.ಜಾ.ಪ.ಪಂ.ಘಟಕ:ಸಾ.ಸ.7:9(2025)ರಲ್ಲಿ ನಿರ್ಣಯ ಕೈಗೊಳ್ಳಾಗಿರುತ್ತದೆ.

ವಿಷಯ-2 : ತುಳು ಭಾಷೆಯಲ್ಲಿ ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಲ್ಲಿ ಮಾಡಬೇಕಾದ ಕ್ರಮಗಳ ಬಗ್ಗೆ ಮಾಹಿತಿ ನೀಡುವುದು ಮತ್ತು ಚರ್ಚಿಸಿ ನಿರ್ಣಯ ಕೈಗೊಳ್ಳುವುದು. ಸಂಶೋಧನಾ ವಿದ್ಯಾರ್ಜನೆಗೆ ವಿಶ್ವವಿದ್ಯಾನಿಲಯಕ್ಕೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದು ಮತ್ತು ಹೆಚ್ಚು ಬೇಡಿಕೆಯಿರುವುದು ಸಂತಸ. ಆದರೆ ವಿಷಯ ಮಾರ್ಗದರ್ಶಕರ ಕೊರತೆ ಇರುವುದರಿಂದ ಅನೇಕರು ವಂಚಿತರಾಗುತ್ತಿದ್ದಾರೆ. ಈ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳುವುದು.

**ನಿರ್ಣಯ:** ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.7:4ರಲ್ಲಿ ನಿರ್ಣಯ ಕೈಗೊಳ್ಳಲಾಗಿರುತ್ತದೆ.

ವಿಷಯ-3 : ಬೋಧಕೇತರ ಸಿಬ್ಬಂದಿಗಳ ಪದೋನ್ನತಿಯಲ್ಲಿ ಉಪಕುಲಸಚಿವರ ಹುದ್ದೆಯ ಪದೋನ್ನತಿಯನ್ನು ಪಡೆಯಲು ಅರ್ಹರಿದ್ದ ನೌಕರರ ಪಟ್ಟಿಯನ್ನು ಸಿಂಡಿಕೇಟ್ ನಲ್ಲಿ ಮಂಡಿಸಿ ನಿರ್ಣಯ ಕೈಗೊಳ್ಳುವುದು.

**ನಿರ್ಣಯ:** ಉಪಕುಲಸಚಿವರ ಹುದ್ದೆಯ ಪದೋನ್ನತಿಗೆ ಸಂಬಂಧಿಸಿದ ವಿಚಾರವನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದರು . ಪರಿನಿಯಮವು ಸರಕಾರದಿಂದ ಅನುಮೋದನೆಗೊಂಡು ಸ್ವೀಕೃತಿಯಾದ ನಂತರ ಮುಂದಿನ ಕ್ರಮಕೈಗೊಳ್ಳಲಾಗುವುದಾಗಿ ಸಭೆಗೆ ತಿಳಿಸಲಾಯಿತು.

ಶಿಕ್ಷಕೇತರ ಸಿಬ್ಬಂದಿಗಳ ಪದೋನ್ನತಿಗೆ ಸಂಬಂಧಿಸಿ ಸಿಂಡಿಕೇಟು ಸದಸ್ಯರುಗಳಿಂದ ಯಾವುದೇ ವಿರೋಧವಿರುವುದಿಲ್ಲ ಈ ಸಂಬಂಧ ದಿನಾಂಕ 15.10.2025ರಂದು ವಿಜಯವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ಸುದ್ದಿಯಲ್ಲಿ ಸಿಂಡಿಕೇಟು ಸದಸ್ಯರುಗಳ ಬಗ್ಗೆ ಅವಹೇಳನಕಾರಿಯಾಗಿ, ಅವರ ಘನತೆಗೆ

ಧಕ್ಕೆಯಾಗುವ ರೀತಿಯಲ್ಲಿ ವರದಿ ಮಾಡಿರುವುದನ್ನು ಖಂಡಿಸಲು ನಿರ್ಣಯಿಸಲಾಯಿತು. ಮುಂದುವರಿದು, ಈ ಬಗ್ಗೆ ಕಾನೂನು ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭೆ ನೀಡಿರುವ ಬೆಂಬಲವನ್ನು ಶಿಕ್ಷಕೇತರ ಸಿಬ್ಬಂದಿಗಳ ಗಮನಕ್ಕೆ ತರಲು ನಿರ್ಣಯಿಸಲಾಯಿತು.

ವಿಷಯ-4 ಪರೀಕ್ಷಾಂಗ ವಿಭಾಗದಲ್ಲಿ ಪ್ರಸ್ತುತ ಸಪ್ಟೆಂಬ ರ್ 30 ರವರೆಗೆ ಅಂಕಪಟ್ಟಿ ಹಾಗೂ Convocation Certificateಗೆ ಅರ್ಜಿ ಹಾಕಿ ಇನ್ನೂ ನೀಡದೆ ಬಾಕಿ ಉಳಿಕೆಯಾಗಿರುವ ಸಂಖ್ಯೆಯ ಮಾಹಿತಿಯನ್ನು ಸಲ್ಲಿಸುವುದು . ಮುಂದಿನ ಪ್ರಗತಿಗಾಗಿ ಚರ್ಚಿಸುವುದು.

**ನಿರ್ಣಯ:** ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕ್ರಮವಹಿಸಲು ಸಹಾಯವಾಣಿಯನ್ನು [Heldp desk] ತೆರೆದು ವಿದ್ಯಾರ್ಥಿಗಳಿಗೆ ಬೇಕಾಗಿರುವ ಮಾಹಿತಿಯನ್ನು ಒದಗಿಸಲು ಸೂಕ್ತ ಕ್ರಮಕೈಗೊಳ್ಳಲು ಕುಲಸಚಿವರು (ಪರೀಕ್ಷಾಂಗ) ಇವರಿಗೆ ಸಲಹೆ ನೀಡಲಾಯಿತು.

ವಿಷಯ-5 : ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು ಹಂಪನಕಟ್ಟೆಯಲ್ಲಿ ಸಪ್ಟೆಂಬರ್ 27 2025ರಂದು ನಡೆದ ಚುನಾವಣೆಗೆ ಸಂಬಂಧಪಟ್ಟಂತೆ ವಿದ್ಯಾರ್ಥಿಗಳಿಗೆ ಆಗಿದೆ ಎನ್ನಲಾದ ಬೆದರಿಕೆ ಹಾಗೂ ತೊಂದರೆಗಳ ಬಗ್ಗೆ ವಿದ್ಯಾರ್ಥಿಗಳು ಪ್ರಾಂಶುಪಾಲರಿಗೆ ನೀಡಿದ ದೂರು ಮತ್ತು ಇದಕ್ಕೆ ಕೈಗೊಂಡ ಕ್ರಮಗಳ ಬಗ್ಗೆ ಪ್ರಾಂಶುಪಾಲರಿಂದ ಮಾಹಿತಿ ಪಡೆಯುವುದು ಮತ್ತು ಆಗಿರುವ ಆಡಳಿತ ಲೋಪದ ವಿರುದ್ಧ ಕ್ರಮ ಕೈಗೊಳ್ಳುವುದು.

**ನಿರ್ಣಯ:** ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರೊಂದಿಗೆ ಕುಲಪತಿಯವರು ಈಗಾಗಲೇ ಚರ್ಚಿಸಲಾಗಿರುವ ವಿಚಾರವನ್ನು ಸಭೆಯಲ್ಲಿ ತಿಳಿಸಿದರು. ಸಿಂಡಿಕೇಟು ಸದಸ್ಯರಾದ ಶ್ರೀ ರಘುರಾಜ್ ಇವರು ಪ್ರಾಂಶುಪಾಲರೊಂದಿಗೆ ಈ ಸಂಬಂಧ ಮಾತನಾಡಲು ಸೂಚಿಸಿರುವುದಾಗಿ ತಿಳಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.7:7(2025)

ವಿಷಯ: ಶೈಕ್ಷಣಿಕ ವರ್ಷ 2025-26ನೇ ಸಾಲಿಗೆ ಸ್ನಾತಕ /ಸ್ನಾತಕೋತ್ತರ ಕಾರ್ಯಕ್ರಮಗಳ ಪರೀಕ್ಷಾ ಶುಲ್ಕ ಹಾಗೂ ಇತರ ದಾಖಲೆಗಳ / ಸರ್ಟಿಫಿಕೇಟುಗಳ ಶುಲ್ಕಗಳನ್ನು ನಿಗದಿಪಡಿಸುವ ಬಗ್ಗೆ.

**ನಿರ್ಣಯ:** ದಿನಾಂಕ 05.08.2025ರಂದು ನಡೆದ ಶುಲ್ಕ ಪರಿಷ್ಕರಣಾ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಕಾನೂನು ಘಟಕ:ಸಾ.ಸ.7:8(2025)

ವಿಷಯ: BSR Infratech India Ltd . ಸಂಸ್ಥೆ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ನಡುವಿನ ವಿವಾದದ ಬಗ್ಗೆ Arbitrator ರವರು ಮಾಡಿರುವ Award ಗೆ ಸಂಬಂಧಿಸಿ Commercial Court , ಬೆಂಗಳೂರಿನಲ್ಲಿ ಹೂಡಿರುವ ಮೇಲ್ಮನವಿ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಛ ನ್ಯಾಯಾಲಯದ ಲ್ಲಿ 2nd ಮೇಲ್ಮನವಿ ಸಲ್ಲಿಸುವ ಕುರಿತಂತೆ ಸದರಿ ಪ್ರಕರಣವನ್ನು ನಿರ್ವಹಿಸುತ್ತಿರುವ ನ್ಯಾಯವಾದಿ ಶ್ರೀ ರಾಜೇಂದ್ರ ಕುಮಾರ್ ಸುಂಗೆ ಇವರ ಬಿಲ್ಲು ಪಾವತಿಯ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪ.ಜಾ.ಪ.ಪಂ.ಘಟಕ:ಸಾ.ಸ.7:9(2025)

ವಿಷಯ: ಶೈ.ವ. 2023-24ನೇ ಸಾಲಿನಲ್ಲಿ ಸ್ನಾತಕೋತ್ತರ ವಾಣಿಜ್ಯ ವಿಭಾಗದಲ್ಲಿ ಪಾವತಿ ವರ್ಗದಡಿ ಪ್ರವೇಶಾತಿ ಪಡೆದ 15 ಮಂದಿ ಪರಿಶಿಷ್ಟ ಜಾತಿ / ಪಂಗಡದ ವಿದ್ಯಾರ್ಥಿಗಳಿಂದ ಸಾಮಾನ್ಯವರ್ಗದ ವಿದ್ಯಾರ್ಥಿಗಳಿಗೆ ನಿಗದಿಪಡಿಸಿದ ಶುಲ್ಕಗಳನ್ನು ಪಾವತಿಸಿಕೊಂಡು ವ್ಯತ್ಯಾಸದ ಮೊತ್ತ ವಿನಾಯಿತಿ ನೀಡಿರುವ ಬಗ್ಗೆ ಘಟನೋತ್ತರ ಅನುಮತಿ ನೀಡುವ ಕುರಿತು.

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು. ಈ ಅನುಕೂಲವನ್ನು ಶೈಕ್ಷಣಿಕ ವರ್ಷ 2023-24ನೇ ಸಾಲಿನ ಸ್ನಾತಕೋತ್ತರ ಸಮಾಜಕಾರ್ಯ ಕಾರ್ಯಕ್ರಮಕ್ಕೆ ಪ್ರವೇಶಾತಿ ಪಡೆದ ಇಂತಹ ಪ್ರಕರಣವಿರುವ ವಿದ್ಯಾರ್ಥಿಗಳಿಗೂ ಕೂಡ ಅನ್ವಯವಾಗುವಂತೆ ಜಾರಿಗೆ ತರಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಹಣಕಾಸು:ಸಾ.ಸ.7:10(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ಲೆಕ್ಕಪರಿಶೋಧನಾ ಆಕ್ಷೇಪಣೆಗಳ ಮೇಲಿನ ಅನುಪಾಲನಾ ವರದಿಯ ಅನುಮೋದನೆ ಕುರಿತು .

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ:ಸಾ.ಸ.7:11(2025)

ವಿಷಯ: ಸ್ನಾತಕೋತ್ತರ ಗಣಕ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರಾಧ್ಯಾಪಕರಾದ ದಿ ವಂಗತ ಡಾ . ದೊರೆಸ್ವಾಮಿ ಇವರು ಮಾನ್ಯತೆ ಹೊಂದಿರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ವೈದ್ಯಕೀಯ ವೆಚ್ಚದ ಅರ್ಹತಾ ಮೊತ್ತವನ್ನು ಮರುಭರಿಸುವ ಬಗ್ಗೆ.

**ನಿರ್ಣಯ:** ತುರ್ತು ಚಿಕಿತ್ಸೆ ಅಗತ್ಯದ ಕಾರಣದಿಂದ ಸರಕಾರದಿಂದ ಅನುಮೋದಿತವಲ್ಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ದಿವಂಗತ ಡಾ. ದೊರೆಸ್ವಾಮಿ ಇವರ ವೈದ್ಯಕೀಯ ವೆಚ್ಚ ಮರುಭರಣೆ ಮೊತ್ತ ರೂ.1,36,300/-(ರೂಪಾಯಿ ಒಂದು ಲಕ್ಷದ ಮೂವತ್ತಾರು ಸಾವಿರದ ಮುನ್ನೂರು ಮಾತ್ರ)ವನ್ನು ಪಾವತಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.7:12(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಖಾಯಂ ನೆಲೆಯಲ್ಲಿ ನೇಮಕಗೊಂಡ ಕರ್ತವ್ಯ ನಿರ್ವಹಿಸು ತ್ತಿರುವ ಬೋಧಕೇತರ ಸಿಬ್ಬಂದಿಯ ಪರಿವೀಕ್ಷಣಾ ಅವಧಿಯನ್ನು ಘೋಷಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.7:13(2025)

ವಿಷಯ: ಶ್ರೀ ಅಚ್ಚುತ ಗಟ್ಟಿ , ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ 1 : ಮಾನವತಾವಾದಿ ಸಮಾಜ ಸುಧಾರಕ ಬ್ರಹ್ಮಶ್ರೀ ನಾರಾಯಣ ಗುರುಗಳ ಜೀವನದ ಆದರ್ಶ ಮತ್ತು ತತ್ವಗಳು ಯುವ ಜನಾಂಗಕ್ಕೆ ಪ್ರಸ್ತುತ ಕಾಲಘಟ್ಟದಲ್ಲಿ ಅವಶ್ಯವಾಗಿರುವುದರಿಂದ ಅವರು ಸಮಾಜಕ್ಕೆ ನೀಡಿರುವ ಕೊಡುಗೆಗಳನ್ನು ಯುವ ಜನಾಂಗಕ್ಕೆ ಅಂದರೆ ಪದವಿ ವಿದ್ಯಾರ್ಥಿಗಳಿಗೆ ಕನ್ನಡ ಪಠ್ಯ ಪುಸ್ತಕವನ್ನಾಗಿ ಮಾಡುವ ಬಗ್ಗೆ ಪ್ರಸ್ತಾವನೆ.

**ನಿರ್ಣಯ:** ಪ್ರಸ್ತಾವನೆಯನ್ನು ಪರಿಗಣಿಸಿಕೊಂಡು ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗಕ್ಕೆ ಸಲ್ಲಿಸಿ ಪುಸ್ತಕವನ್ನು ತಯಾರಿಸಲು ಸೂಕ್ತ ಕ್ರಮಕೈಗೊಳ್ಳುವುದಾಗಿ ತಿಳಿಸಲಾಯಿತು.

ವಿಷಯ 2 : ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ 400 ಮೀ. ಸುತ್ತಳತೆಯ ಕ್ರೀಡಾಂಗಣವು ಅಂತರ ಕಾಲೇಜು ವಿದ್ಯಾರ್ಥಿಗಳ ಕ್ರೀಡಾ ಕೂ ಟ ಏರ್ಪಡಿಸಲು ಹಾಗೂ ವಿಶ್ವವಿದ್ಯಾ ನಿಲಯ ಮಟ್ಟದಲ್ಲಿ ಆಯ್ಕೆಯಾದ ಕ್ರೀಡಾಪಟುಗಳಿಗೆ ತರಬೇತಿ ನಿರ್ವಹಿಸಲು ಈ ಕ್ರೀಡಾಂಗಣವನ್ನು ವಿದ್ಯಾರ್ಥಿಗಳ ಕ್ರೀಡಾ ಶುಲ್ಕದಲ್ಲಿ ಅಭಿವೃದ್ಧಿಪಡಿಸಿ

ನಿರ್ವಹಣೆ ಮಾಡಬೇಕಾಗಿ ಪ್ರಸ್ತಾವನೆ.

**ನಿರ್ಣಯ:** ವಿದ್ಯಾರ್ಥಿಗಳಿಂದ ಸಂಗ್ರಹವಾಗುವ ಕ್ರೀಡಾ ಶುಲ್ಕದಲ್ಲಿ ಅಭಿವೃದ್ಧಿ ನಿರ್ವಹಣೆ ಮಾಡಲು ಸಾಧ್ಯವಾಗದಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು.

ವಿಷಯ 3 : ನೆಹರೂ ಅಧ್ಯಯನ ಪೀಠದಲ್ಲಿ ಸಾಕಷ್ಟು ಅನುದಾನವಿರುವುದರಿಂದ ಯುವ ಜನಾಂಗಕ್ಕೆ ನೆಹರೂರವರ ಪ್ರಗತಿಶೀಲ ಹಾಗೂ ಪಂಚಶೀಲ ತತ್ವಗಳ ಮತ್ತು ಯುವ ನಾಯಕತ್ವದ ಬಗ್ಗೆ ಮಂಗಳೂರು ವಿಶ್ವವಿದ್ಯಾನಿಲಯ ಸಭಾಂಗಣದಲ್ಲಿ ಮೂರು ದಿನಗಳ ತರಬೇತಿ ಕೈಗೊಳ್ಳುವ ಬಗ್ಗೆ ಪ್ರಸ್ತಾವನೆ.

**ನಿರ್ಣಯ:** ಈಗಾಗಲೇ ಸ್ನಾತಕೋತ್ತರ ಆಂಗ್ಲ ವಿಭಾಗದ ಸಹಕಾರದೊಂದಿಗೆ ನೆಹರೂ ಚಿಂತನ ಕೇಂದ್ರದ ವತಿಯಿಂದ 5 ದಿನಗಳ Faculty Development Programme ಕಾರ್ಯಕ್ರಮವನ್ನು ನಡೆಸಿರುವ ಬಗ್ಗೆ ಸಭೆಯಲ್ಲಿ ತಿಳಿಸಲಾಯಿತು.

ಸಿಂಡಿಕೇಟು ಸದಸ್ಯರುಗಳ ನಾಯಕತ್ವ ಸಾಮರ್ಥ್ಯವನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ನೆಹರು ಚಿಂತನ ಕೇಂದ್ರದ ವತಿಯಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹಾಗೂ ಈ ಕಾರ್ಯಕ್ರಮದ ಸಂಘಟನಾ ಉಸ್ತುವಾರಿಯ ಜವಾಬ್ದಾರಿಯನ್ನು ಸಿಂಡಿಕೇಟು ಸದಸ್ಯರುಗಳೇ ವಹಿಸಿಕೊಳ್ಳುವ ಬಗ್ಗೆ ನಿರ್ಣಯಿಸಲಾಯಿತು.

ವಿಷಯ 4 : ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ವಿಶ್ವಮಂಗಳ ಎಂಬ ಅನುದಾನ ರಹಿತ ಆಂಗ್ಲ ಮಾಧ್ಯಮ ಶಾಲೆ , ವಿಶ್ವವಿದ್ಯಾನಿಲಯದ ಜಮೀನಿನಲ್ಲಿ ವಿಶ್ವವಿದ್ಯಾನಿಲಯದ ಅನುದಾನದಲ್ಲಿ ಹಾಗೂ ವಿದ್ಯಾರ್ಥಿ ಪೋಷಕರ ಶುಲ್ಕದಿಂದ ನಿರ್ಮಾಣವಾಗಿರುವ ಕಟ್ಟಡದಲ್ಲಿ ನಡೆಸಲ್ಪಡುತ್ತದೆ . ವಿಶ್ವವಿದ್ಯಾನಿಲಯದ ವತಿಯಿಂದಲೇ ನೀರಿನ ಸೌಲಭ್ಯ ಹಾಗೂ ವಿದ್ಯುತ್ ಸೌಲಭ್ಯವನ್ನು ಒದಗಿಸುವುದರಿಂದ ಈ ಸಂಸ್ಥೆಯನ್ನು ವಿಶ್ವವಿದ್ಯಾನಿಲಯದ ಮೇಲುಸ್ತುವಾರಿಯಲ್ಲಿಯೇ ನಡೆಸಬೇಕು . ವಿಶ್ವಮಂಗಳ ವಿದ್ಯಾಸಂಸ್ಥೆಗೆ ಸ್ವತಂತ್ರ ಅಧಿಕಾರ ನೀಡಿರುವುದು ಕಾನೂನಿಗೆ ವಿರುದ್ಧವಾಗಿದೆ. ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸುವಾಗ ಸ್ವಂತ ಜಮೀನು ಮತ್ತು ಸ್ವಂತ ಕಟ್ಟಡ ಇದ್ದರೆ ಮಾತ್ರ ಸರಕಾರ

ಅನುಮತಿ ನೀಡುವುದು . ಆದರೆ ವಿಶ್ವಮಂಗಳ ವಿದ್ಯಾಸಂಸ್ಥೆಯ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲದಿರುವುದರಿಂದ ಇದು ವಿಶ್ವವಿದ್ಯಾನಿಲಯದ ಆಸ್ತಿಯಾಗಿರುವುದರಿಂದ ವಿಶ್ವವಿದ್ಯಾನಿಲಯದ ಅಧೀನ ಸಂಸ್ಥೆಯಾಗಬೇಕೇ ಹೊರತು ಸ್ವತಂತ್ರ ಸಂಸ್ಥೆಯಾಗುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆಯೇ ಎಂಬುದರ ಬಗ್ಗೆ ಪ್ರಸ್ತಾವನೆ.

**ನಿರ್ಣಯ:** ಪ್ರಸ್ತುತ ವಿಶ್ವಮಂಗಳ ಶಾಲೆಗೆ ಸಂಬಂಧಿಸಿ ನ್ಯಾಯಾಲಯದಲ್ಲಿ ದಾವೆಯಿರುವುದರಿಂದ ಈ ಹಂತದಲ್ಲಿ ಯಾವುದೇ ಕ್ರಮ ತೆಗೆದುಕೊಳ್ಳುವುದು ಸೂಕ್ತವಲ್ಲವೆಂದು ಸಭೆಯಲ್ಲಿ ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.7:14(2025)

ವಿಷಯ: IQAC, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿನ ಅಗೋಸ್ತು 2025ರ ಚಟುವಟಿಕೆಯ ಮುಖ್ಯಾಂಶದ ವರದಿಯನ್ನು ಅವಗಾಹನೆಗೆ ಮಂಡಿಸುವ ಬಗ್ಗೆ.

**ನಿರ್ಣಯ:** ವರದಿಯಲ್ಲಿರುವ ಮುಖ್ಯಾಂಶಗಳನ್ನು ಸಭೆಯ ಗಮನಕ್ಕೆ ತರಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:ಸಾ.ಸ.7:15(2025)

ವಿಷಯ: 2025-26ನೇ ಸಾಲಿನ ಸ್ನಾತಕ /ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಬೇಕಾದ ಪರೀಕ್ಷಾ ನಮೂನೆ /ಲಕೋಟೆ/ಲೇಖನ ಸಾಮಗ್ರಿಗಳನ್ನು ವಿದ್ಯುನ್ಮಾನ ಸಂಗ್ರಹಣ ವಿಧಾನದ ಇ -ಟೆಂಡರು ಮೂಲಕ ಖರೀದಿಸುವ ಬಗ್ಗೆ.

**ನಿರ್ಣಯ:** ದಿನಾಂಕ 27.10.2025ರಂದು ನ ಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:ಸಾ.ಸ.7:16(2025)

ವಿಷಯ: ಜೂನ್/ಜುಲೈ/ಆಗಸ್ಟ್ - 2025ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ / ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ.

**ನಿರ್ಣಯ:** ತನಿಖಾ ವರದಿಯನ್ನು ಅನುಮೋದಿಸಲಾಯಿತು.

ಹೆಚ್ಚಾಗಿ ಪರೀಕ್ಷಾ ಅವ್ಯವಹಾರ ನಡೆಯುತ್ತಿರುವ ಪರೀಕ್ಷಾ ಕೇಂದ್ರಗಳನ್ನು ಗುರುತಿಸಿ ಕೈಬಿಡಲು ಹಾಗೂ ಇವುಗಳ ವಿವರವನ್ನು ಮುಂದಿನ ಸಿಂಡಿಕೇಟು

ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ:ಸಾ.ಸ.7:17(2025) |
| ವಿಷಯ: | ಮಂಗಳೂರು ವಿ ಶ್ವವಿದ್ಯಾನಿಲಯ ಮತ್ತು BMS College of Engineering , Bengaluru ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ. |
| **ನಿರ್ಣಯ:** | ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಎಸಿಸಿ:ಸಾ.ಸ.7:18(2025) |
| ವಿಷಯ: | ಪೂರ್ಣಪ್ರಜ್ಞ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಉಡುಪಿ ಇಲ್ಲಿನ ಎಂ.ಬಿ.ಎ. ಸ್ನಾತಕೋತ್ತರ ವಿಭಾಗವನ್ನು ಪಿಹೆಚ್ .ಡಿ. ವ್ಯಾಸಂಗಕ್ಕೆ ಸಂಶೋಧನಾ ಕೇಂದ್ರವನ್ನಾಗಿ ಮಾನ್ಯತೆ ನೀಡುವ ಬಗ್ಗೆ. |
| **ನಿರ್ಣಯ:** | ದಿನಾಂಕ 16.09.2025ರಂದು ಕಾಲೇಜಿಗೆ ಭೇಟಿ ನೀಡಿದ ಸಮಿತಿಯ ವರದಿಯನ್ನು ಪರಿಗಣಿಸಿಕೊಂಡು ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಎಸಿಸಿ:ಸಾ.ಸ.7:19(2025) |
| ವಿಷಯ: | ಸ್ವಾಯತ್ತ ಕಾಲೇಜುಗಳು ಪ್ರಾರಂಭಿಸಿರುವ ಹೊಸ ಕಾರ್ಯಕ್ರಮಗಳು ಮತ್ತು ಹೆಚ್ಚುವರಿ ವಿಭಾಗಗಳಿಗೆ ಅನುಮತಿ ನೀಡುವ ಬಗ್ಗೆ. |
| **ನಿರ್ಣಯ:** | ದಿನಾಂಕ 09.10.2025ರಂದು ನಡೆದ ಶೈಕ್ಷಣಿಕ ಮಂಡಳಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು:ಸಾ.ಸ.7:20(2025) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ದೈಹಿಕ ಶಿಕ್ಷಣ ವಿಭಾಗಕ್ಕೆ ಅಧ್ಯಕ್ಷರ ನೇಮಕಾತಿ ಬಗ್ಗೆ. |
| **ನಿರ್ಣಯ:** | ಡಾ.ಜೆರಾಲ್ಡ್ ಸಂತೋಷ್ ಡಿ'ಸೋಜ, ನಿರ್ದೇಶಕರು, ಸ್ನಾತಕೋತ್ತರ ದೈಹಿಕ ಶಿಕ್ಷಣ ವಿಭಾಗ ಇವರನ್ನು ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಎಸಿಸಿ:ಸಾ.ಸ.7:21(2025) |
| ವಿಷಯ: | ಕೆನರಾ ಕಾಲೇಜು, ಮಹಾತ್ಮ ಗಾಂಧಿ ರಸ್ತೆ, ಕೊಡಿಯಾಲ್‌ಬೈಲ್, ಮಂಗಳೂರು ವಿದ್ಯಾಸಂಸ್ಥೆಗೆ ಸ್ವಾಯತ್ತ ಸ್ಥಾನಮಾನ ನೀಡುವ ಬಗ್ಗೆ. |
| **ನಿರ್ಣಯ:** | ದಿನಾಂಕ 09.10.2025ರಂದು ನಡೆದ ಶೈಕ್ಷಣಿಕ ಮಂಡಳಿ ಸಭೆಯ |

ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.7:22(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯಕ್ಕೆ ನಿರ್ದೇಶಕರನ್ನು ನೇಮಕ ಮಾಡಿರುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.7:23(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗದ ಬೋಧಕರ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.7:24(2025)

ವಿಷಯ: ಶ್ರೀ ಮಹಮ್ಮದ್ ಸವಾದ್, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

**ನಿರ್ಣಯ:** ಈ ಕೆಳಗಿನಂತೆ ವಿವಿಧ ಸಮಿತಿಗಳಿಗೆ ಸಿಂಡಿಕೇಟು ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲಾಯಿತು.

| | |
|---|---|
| 1.ಹಣಕಾಸು ಸಮಿತಿ | 1. ಶ್ರೀ ಸಿ.ಎ. ನಿತಿನ್ ಜೆ. ಶೆಟ್ಟಿ |
| 2.ಖರೀದಿ ಸಮಿತಿ | 1. ಶ್ರೀ ರಘುರಾಜ್<br>2. ಶ್ರೀಮತಿ ಜೂಡಿತ್ ಮೆಂಡೋನ್ಸ |
| 3.ಟೆಂಡರು ತಾಂತ್ರಿಕ ಪರಿಶೀಲನಾ ಸಮಿತಿ | 1. ಶ್ರೀ ಅಚ್ಯುತ ಗಟ್ಟಿ<br>2. ಶ್ರೀ ಮಹಮ್ಮದ್ ಸವಾದ್ |
| 4. ಕಟ್ಟಡ ಸಮಿತಿ | 1.ಶ್ರೀ ಸುರೇಶ್ ಕುಮಾರ್ ಬಿ. ನಾವೂರು<br>2. ಡಾ. ಎಸ್.ಬಿ.ಎಂ. ಪ್ರಸನ್ನ |

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.7:25(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಎಂ.ಬಿ.ಎ ವಿಭಾಗ

ಮತ್ತು ಮಾನವಿಕ ಕಟ್ಟಡಗಳಲ್ಲಿರುವ ನೆಲಹಾಸಿನ ದುರಸ್ತಿ ಮತ್ತು ಇನ್ನಿತರ ದುರಸ್ತಿ ಕಾಮಗಾರಿ - ಟೆಂಡರು ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 19.08.2025ರ ಟೆಂಡರು ತಾಂತ್ರಿಕ ಪರಿಶೀಲನಾ ಸಮಿತಿ ಸಭೆಯ ಶಿಫಾರಸ್ಸನ್ನು ಪರಿಗಣಿಸಿಕೊಂಡು ಕಟ್ಟಡ ಸಮಿತಿ ಸಭೆಯ ಅನುಮೋದನೆಯ ನಿರೀಕ್ಷೆಯ ಮೇರೆಗೆ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ: ಸಾ.ಸ.7:26(2025)

ವಿಷಯ: ಮಂಗಳೂರು ವಿಶ್ವ ವಿದ್ಯಾನಿಲಯ ಆವರಣದಲ್ಲಿ ಹೊರಾಂಗಣ ತರಗತಿ ನಿರ್ಮಾಣ ಕಾಮಗಾರಿ ಮತ್ತು MBA ವಿಭಾಗದ ಕಟ್ಟಡ ಹೊರಾಂಗಣದಲ್ಲಿ Faculty ಸಿಬ್ಬಂದಿಗಳ ವಾಹನ ತಂಗುದಾಣ ನಿರ್ಮಾಣ ಕಾಮಗಾರಿ - (ಪ್ಯಾಕೇಜ್ ಟೆಂಡರ್) - ಟೆಂಡರು ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 19.08.2025ರ ಟೆಂಡರು ತಾಂತ್ರಿಕ ಪರಿಶೀಲನಾ ಸಮಿತಿ ಸಭೆಯ ಶಿಫಾರಸ್ಸನ್ನು ಪರಿಗಣಿಸಿಕೊಂಡು ಕಟ್ಟಡ ಸಮಿತಿ ಸಭೆಯ ಅನುಮೋದನೆಯ ನಿರೀಕ್ಷೆಯ ಮೇರೆಗೆ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.7:27(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ 400 ಮೀ. ಟ್ರ್ಯಾಕ್ ಆಟದ ಮೈದಾನಕ್ಕೆ ವಸತಿಗೃಹದ ಕಡೆಯಿಂದ ಬರುವ ದಾರಿಗೆ Culvert ನಿರ್ಮಿಸುವ ಕಾಮಗಾರಿ

**ನಿರ್ಣಯ:** ದಿನಾಂಕ 19.08.2025ರ ಟೆಂಡರು ತಾಂತ್ರಿಕ ಪರಿಶೀಲನಾ ಸಮಿತಿ ಸಭೆಯ ಶಿಫಾರಸ್ಸನ್ನು ಪರಿಗಣಿಸಿಕೊಂಡು ಕಟ್ಟಡ ಸಮಿತಿ ಸಭೆಯ ಅನುಮೋದನೆಯ ನಿರೀಕ್ಷೆಯ ಮೇರೆಗೆ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.7:28(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಸತಿನಿಲಯದ 40 KLD ಸಾಮರ್ಥ್ಯದ STPಯ ಮರು ಬಳಕೆಯ (Recycled Water ) ನೀರನ್ನು ದ್ವಿಪಥ ರಸ್ತೆಯ ಗಾರ್ಡನ್‌ಗಳಿಗೆ ಸರಬರಾಜು ಮಾಡುವುದಕ್ಕೆ ಪಂಪಿಂಗ್ ವ್ಯವಸ್ಥೆಯನ್ನು ಕೊಳವೆ ಸಾಲಿನೊಂದಿಗೆ ಒದಗಿಸಿ ಅಳವಡಿಸುವ ಕಾಮಗಾರಿ.

**ನಿರ್ಣಯ:** ದಿನಾಂಕ 19.08.2025ರ ಟೆಂಡರು ತಾಂತ್ರಿಕ ಪರಿಶೀಲನಾ ಸಮಿತಿ ಸಭೆಯ ಶಿಫಾರಸ್ಸನ್ನು ಪರಿಗಣಿಸಿಕೊಂಡು ಕಟ್ಟಡ ಸಮಿತಿ ಸಭೆಯ ಅನುಮೋದನೆಯ ನಿರೀಕ್ಷೆಯ ಮೇರೆಗೆ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.7:29(2025)

ವಿಷಯ: IQAC, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿನ ಸೆಪ್ಟೆಂಬರ್ 2025ರ ಚಟುವಟಿಕೆಯ ಮುಖ್ಯಾಂಶದ ವರದಿಯನ್ನು ಅವಗಾಹನೆಗೆ ಮಂಡಿಸುವ ಬಗ್ಗೆ.

**ನಿರ್ಣಯ:** ವರದಿಯನ್ನು ಅವಗಾಹಿಸಲಾಯಿತು. ಮುಖ್ಯಾಂಶಗಳನ್ನು ಸಭೆಯ ಗಮನಕ್ಕೆ ತರಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.7:30(2025)

ವಿಷಯ: ನೆಹರು ಚಿಂತನ ಕೇಂದ್ರ -Faculty Development Programme ಗೆ ಆಗಮಿಸುವ ಶಿಕ್ಷಕರಿಗೆ ಊಟ ಉಪಹಾರಕ್ಕೆ ಸಂಬಂಧಿಸಿದ ಪ್ರಸ್ತಾವನೆಯನ್ನು ಮಂಡಿಸುವ ಬಗ್ಗೆ.

**ನಿರ್ಣಯ:** ದಿನಾಂಕ 27.10.2025ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.7:31(2025)

ವಿಷಯ: SERB Project , ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗ , Whole genome sequiencing, whole mitochondrial DNA and collection of SNP micro array Data through affymmetric analysis ನಡೆಸುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ದಿನಾಂಕ 27.10.2025ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.7:32(2025)

ವಿಷಯ: ವಿಶ್ವವಿದ್ಯಾನಿಲಯ ಕಾಲೇಜು , ಮಂಗಳೂರು ಇಲ್ಲಿಯ ಸ್ನಾತಕ ವಿಭಾಗಗಳ ಪ್ರಯೋಗಾಲಯಕ್ಕೆ ಬೇಕಾದ ರಾಸಾಯನಿಕ /ಗ್ಲಾಸ್ ವೇರ್/ಬಳಕೆ ವಸ್ತುಗಳ ಖರೀದಿ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ದಿನಾಂಕ 27.10.2025ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಇತರ ವಿಷಯಗಳು:**

1. ಶೈಕ್ಷಣಿಕ ವರ್ಷ 2026-27ನೇ ಸಾಲಿನ ಕಾಲೇಜುಗಳ ಸಂಯೋಜನೆಗೆ ಸಂಬಂಧಿಸಿ ಕಾಲೇಜುಗಳಿಗೆ ಭೇಟಿ ನೀಡುವ ಸ್ಥಳೀಯ ವಿಚಾರಣಾ ಸಮಿತಿಗಳಲ್ಲಿ ಸಿಂಡಿಕೇಟು ಸದಸ್ಯರುಗಳನ್ನು ಸೇರ್ಪಡೆಗೊಳಿಸುವುದಾಗಿ ಸಭೆಯಲ್ಲಿ ತಿಳಿಸಲಾಯಿತು ಹಾಗೂ ಸಮಿತಿ ರಚಿಸುವ ಅಧಿಕಾರವನ್ನು ಕುಲಪತಿಯವರಿಗೆ ನೀಡಲಾಯಿತು.

ಕೊನೆಯದಾಗಿ ಕುಲಪತಿಗಳು ಸದಸ್ಯರುಗಳ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಯಗೊಳಿಸಿದರು.

| | |
|---|---|
| ಸಹಿ/- | ಸಹಿ/- |
| **ಕುಲಸಚಿವರು** | **ಕುಲಪತಿಯವರು** |